ಆ) ಸಾಕಷ್ಟಿಲ್ಲ ಆದರೂ ೧೯೯೯-೨೦೦೦ನೇ ಸಾಲಿನಲ್ಲಿ ಅಲೋಪಥಿಕ್ ವಿಭಾಗದಲ್ಲಿ ರೂ. ೩,೬೮,೬೨೮ಗಳ ಮೊತ್ತದ ಔಷಧಿ ಸಾಮಗ್ರಿಗಳನ್ನು ಪೂರೈಸಲಾಗಿದೆ.

ಇ) ಅವಶ್ಯ ಬಿದ್ದರೆ ನೀಡಲಾಗುವುದು.

ತಾಸಗಿ ನರ್ಸಿಂಗ್ ಹೋಂಗಳಲ್ಲಿ ಚಿಕಿತ್ಸೆಗಳು, ಆಪರೇಷನ್ ಮತ್ತು ಹೆರಿಗೆಗಳಿಗಾಗಿ ದರವನ್ನು ನಿಗದಿಗೊಳಿಸಂಪ ಬಗ್ಗೆ

೨೩೪. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ತಾಸಗಿ ನರ್ಸಿಂಗ್ ಹೋಂಗಳಲ್ಲಿ ಚಿಕಿತ್ಸೆ, ಔಷಧಿಗಳು, ಆಪರೇಶನ್ ಮತ್ತು ಹೆರಿಗೆಗಳಿಗಾಗಿ ಮನ ಬಂದಂತೆ ಹಣವನ್ನು ಸುಲಿಗೆ ಮಾಡುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರ ಇವುಗಳಿಗಾಗಿ ದರಗಳನ್ನು ನಿಗದಿಗೊಳಿಸಲಾಗಿದೆಯೇ ?

ಇ) ಇಲ್ಲದಿದ್ದಲ್ಲಿ ಕೂಡಲೇ ಸರ್ಕಾರ ತಾಸಗಿ ನರ್ಸಿಂಗ್ ಹೋಂಗಳಿಗೆ ಮೇಲ್ಕಂಡ ಸೇವೆಗಳಿಗಾಗಿ ದರಗಳನ್ನು ನಿಗದಿಗೊಳಿಸುತ್ತದೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು)—

ಅ) ಈ ವಿಷಯದ ಬಗ್ಗೆ ಯಾವುದೇ ಲಿಖಿತ ದೂರುಗಳು ಬಂದಿರುವುದಿಲ್ಲ.

ಆ) ಇಲ್ಲ

ಇ) ಈ ವಿಷಯ ಪರಿಶೀಲನೆಯಲ್ಲಿದೆ.

ಆಹಾರ ವಸ್ತುಗಳ ವಿತರಣೆಯಲ್ಲಿ ದುರ್ವ್ಯವಹಾರ ನಡೆಯುತ್ತಿರುವುದನ್ನು ತಡೆಗಟ್ಟುವ ಬಗ್ಗೆ

೨೩೫. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯಕ್ಕೆ ಬರುತ್ತಿರುವ ಧಾನ್ಯದ ವಿತರಣೆಯನ್ನು ಯೋಗ್ಯವಾದ ರೀತಿಯಲ್ಲಿ ವಿತರಣೆ ಮಾಡುವ ವ್ಯವಸ್ಥೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು ?

ಆ) ದಿನನಿತ್ಯ ಜೀವನ ಉಪಯೋಗಕ್ಕೆ ಇರುವ ವಸ್ತುಗಳ ವಿತರಣೆಯಲ್ಲಿ ದುರ್ವ್ಯವಹಾರ ನಡೆಯುತ್ತಿದ್ದು, ಇದರ ವಿಶೇಷ ತನಿಖೆಗೆ ಸರ್ಕಾರದಿಂದ ತೆಗೆದುಕೊಳ್ಳಬಹುದಾದ ಕ್ರಮವೇನು ?

ಶ್ರೀ ಟಿ; ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಭಾರತ ಸರ್ಕಾರದಿಂದ ತಿಂಗಳಿಗೆ ಬಿಡುಗಡೆ ಮಾಡುವ ಅಕ್ಕಿ, ಗೋಧಿ, ಸಕ್ಕರೆ, ತಾಳೀಎಣ್ಣೆ ಯನ್ನು ಜಿಲ್ಲೆಗಳಿಗೆ ಪಡಿತರ ಚೀಟಿಗಳ ಸಂಖ್ಯೆಯ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿದೆ. ಈ ಹಂಚಿಕೆ ಮಾಡಿದ ಆಹಾರ ಧಾನ್ಯಗಳನ್ನು ನ್ಯಾಯಬೆಲೆ ಅಂಗಡಿಯವರು ಸಗಟು ವಾಮಿನಿದಾರರಿಂದ ಎತ್ತುವಳಿ ಮಾಡಿ ಪಡಿತರ ಚೀಟಿದಾರರಿಗೆ ವಿತರಣೆ ಮಾಡಲು ವ್ಯವಸ್ಥೆ ಮಾಡಲಾಗಿದೆ. ಈ ವಿಧಾನದಲ್ಲಿ ಯಾವ ತೊಂದರೆ ಇರುವುದಿಲ್ಲ.

ಆ) ಸಾರ್ವಜನಿಕ ವಿತರಣೆಯ ವ್ಯವಸ್ಥೆಯಲ್ಲಿ ಪಡಿತರ ವಸ್ತುಗಳ ವಿತರಣೆಯಲ್ಲಿ ದುರ್ವ್ಯವಹಾರ ಕಂಡು ಬಂದಲ್ಲಿ ಅಂತಹವರ ವಿರುದ್ಧ ಕಾನೂನಿನ ಮೇರೆಗೆ ಕ್ರಮ ತೆಗೆದುಕೊಳ್ಳುವುದಲ್ಲದೆ ಅಂತಹವರ ಮೇಲೆ ಸಂಬಂಧಪಟ್ಟ ಅಧಿಕಾರಿಗಳಿಂದ ವಿಚಾರಣೆ ನಡೆಸಿ ಅವರ ಹುದ್ದೆಗಳನ್ನು ಅನುತ್ಪಾದಕ್ಕೆ ಸಲ್ಲಿಸುವ ಅಥವಾ ವಜಾ ಮಾಡುವ ಕಾರ್ಯ ಕೈಗೊಳ್ಳಲಾಗುತ್ತಿದೆ, ಅದು ಅಲ್ಲದೆ ದಿನನಿತ್ಯದ ಜೀವನ ಉಪಯೋಗ ವಸ್ತುಗಳ ಅವ್ಯವಹಾರವನ್ನು ತಡೆಗಟ್ಟುವುದಕ್ಕಾಗಿ ಜಾಗೃತ ಸಮಿತಿಯನ್ನು ರಚಿಸಲಾಗಿದೆ